ದಿನಾಂಕ 22.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಕೆ.ವಿ.ಎನ್. ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ತಯಾರಿಸಲು ಮಾಹಿತಿಯನ್ನು ಚಂಗಪ್ಪರವರು ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನನ್ನ ವೃತ್ತಿಯ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ನಿವೃತ್ತ ಯೋಧ. ನಾನು 1997 ಇಸವಿಯಲ್ಲಿ ಸೇನೆಯಿಂದ ನಿವೃತ್ತಿ ಹೊಂದಿರುತ್ತೇನೆ. ನಾನು ಸಿ.ಎ. ಕಾರ್ಯಪ್ಪರವರ ಮಗ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ರೀತಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ನನಗೆ ಸಮನ್ಸ್ ಬಂದಿರುವುದಿಲ್ಲ. ಚಂಗಪ್ಪರವರ ಕೋರಿಕೆಯ ಮೇರೆಗೆ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಸಾಕ್ಷಿಯು ಪುನಃ ನಾನು ಪೂಣಚ್ಚರವರ ಕೋರಿಕೆಯ ಮೇರೆಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

ತೀತಮಾಡ ನಂಜಪ್ಪರವರ ಕುಟುಂಬದ ವೈಯಕ್ತಿಕ ಮಾಹಿತಿ ನನಗೆ ಗೊತ್ತಿದೆ. ಸದರಿ ತೀತಮಾಡ ನಂಜಪ್ಪರವರು ನನ್ನ ತಾಯಿಯಾದ ಗಂಗಮ್ಮರವರ ತಂದೆ. ತೀತಮಾಡ ನಂಜಪ್ಪರವರಿಗೆ ಮೂರು ಜನ ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು. ತೀತಮಾಡ ನಂಜಪ್ಪ ನನ್ನ ಸಂಬಂಧಿಕರು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲ. ಆ ರೀತಿ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ.

ನಿಶಾನೆ ಡಿ. 21 ರ ವಿಚಾರವನ್ನು ನನ್ನ ತಂದೆಯು ನನಗೆ ಹೇಳಿದ ದಿನಾಂಕ, ತಿಂಗಳು ಮತ್ತು ವರ್ಷ ನನಗೀಗ ಜ್ಞಾಪಕವಿಲ್ಲ. ಸದರಿ ವಿಚಾರವನ್ನು ನನ್ನ ತಂದೆಯು ನನಗೆ ಸುಮಾರು 50-60 ವರ್ಷಗಳ ಹಿಂದೆ ತಿಳಿಸಿರುತ್ತಾರೆ. ಆಗ ನನಗೆ ಅಂದಾಜು 9 ವರ್ಷ ವಯಸ್ಸಾಗಿತ್ತು.

ತೀತಮಾಡ ಭೀಮಯ್ಯ, ತೀತಮಾಡ ಗಣಪತಿ ಮತ್ತು ತೀತಮಾಡ ಅರ್ಜುನ ನನ್ನ ಸೋದರಮಾವಂದಿರು.ಅವರುಗಳು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಬೆಕ್ಕೆಸೊಡ್ಲೂರು ಗ್ರಾಮದಿಂದ ನಮ್ಮ ಹೊಸೂರು ಗ್ರಾಮಕ್ಕೆ 25-30 ಕಿ.ಮೀ ಅಂತರವಿದೆ. ನನ್ನ ಚಿಕ್ಕವಯಸ್ಸಿ ನಲ್ಲಿ ನಾನು ನನ್ನ ಅಜ್ಜನ ಮನೆಗೆ ಹೋಗಿ ಬರುತ್ತಿದ್ದೇನು. ನಿಶಾನೆ ಡಿ. 21 ರಲ್ಲಿರುವ ನನ್ನ ತಂದೆಯ ಸಹಿ ಮತ್ತು ಅದರಲ್ಲಿರುವ ಬರವಣಿಗೆ ಬೇರೆ ಬೇರೆಯಾಗಿವೆ ಎಂದರೆ ಸರಿಯಲ್ಲ. ನನ್ನ ತಂದೆಯ ಬೇರೆ ಸಹಿವುಳ್ಳ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದಿಲ್ಲ. ಸಾಕ್ಷಿಯು ಮುಂದುವರೆದು, ಆ ರೀತಿ ದಾಖಲಾತಿಗಳು ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ತಂದೆ ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಿಶಾನೆ ಡಿ. 21 ದಾಖಲೆಯ ಪ್ರಕಾರ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ. 21 ದಾಖಲೆಯನ್ನು ನನ್ನ ತಂದೆಯು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನಿಶಾನೆ ಡಿ. 21 ದಾಖಲೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನನ್ನ

ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿನ ವಿಚಾರಗಳ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ನಾನು ಬರಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಸಹಿ ಇರುವ ಇತರೆ ದಾಖಲೆಗಳು ನನ್ನ ಬಳಿ ಇದ್ದು, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಅವುಗಳಲ್ಲಿರುವ ನನ್ನ ತಂದೆಯ ಸಹಿಗೂ ಮತ್ತು ನಿಶಾನೆ ಡಿ. 21 ರಲ್ಲಿರುವ ನನ್ನ ತಂದೆಯ ಸಹಿಗೂ ವ್ಯತ್ಯಾಸ ಕಾಣುತ್ತದೆ ಎಂಬ ಕಾರಣದಿಂದ, ನಾನು ಆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.